ಎಂ.ಎಸ್. ಆಶಾದೇವಿ

# ಎಲ್ಲರಿಂದ ಎಲ್ಲರಿಗಾಗಿ ಸ್ತ್ರೀವಾದ

ಸ್ತ್ರೀವಾದವು ನಿರ್ಣಾಯಕ ಹಂತವೊಂದನ್ನು ತಲುಪಿದೆ ಎನ್ನುವುದನ್ನು ಒಪ್ಪುತ್ತಾ ನಿರಾಕರಿಸುತ್ತಾ ಸಂಕೀರ್ಣಗೊಳಿಸುತ್ತಾ ಇರುವ ಈ ನಮ್ಮ ಕಾಲದಲ್ಲಿಯೂ 'ಸ್ತ್ರೀವಾದ ಎಂದರೇನು? ಅದೊಂದು ಅನಗತ್ಯವಾದ ಹೋರಾಟ' ಎನ್ನುವ, ಅದನ್ನು ಹೀಗಳೆಯಲು ವಿತಂಡವಾದಗಳನ್ನು ಹೂಡುತ್ತಾ, ಅದನ್ನು ಗೇಲಿ ಮಾಡುತ್ತಾ, ಅದನ್ನು ಹಿಂದಕ್ಕೆ, ಪಕ್ಕಕ್ಕೆ ತಳ್ಳಲು ಸದಾ ಪ್ರಯತ್ನಗಳು ನಡೆಯುತ್ತಲೇ ಇವೆ. ಇದಕ್ಕಿಂತ ಅಪಾಯಕಾರಿಯೂ ದುರಂತಮಯವಾದದ್ದೂ ಆದ ವಾಸ್ತವಗಳೂ ನಮ್ಮೆದುರಿಗೆ ಇವೆ. ಕುಬ್ಜಾತಿಕುಬ್ಜವಾದ ನೆಲೆಯಲ್ಲಿ ಸ್ತ್ರೀವಾದವನ್ನು ಅರ್ಥೈಸಿ, ನಾವು ಇದರ ಪರವಾಗಿದ್ದೇವೆ ಎಂದು ಹಾಕುವ ಸೋಗಿನ ಸನ್ನಿವೇಶಗಳು ಮಹಿಳೆಯರ ಸವಾಲುಗಳನ್ನು ಇನ್ನೂ ತೀವ್ರವಾಗಿಸುತ್ತವೆಯೇ ಹೊರತು ಯಾವ ಸಹಾಯವನ್ನೂ ಮಾಡುವುದಿಲ್ಲ. ಮಿಕ್ಕ ಯಾವುದೇ ತಾತ್ವಿಕತೆಯೋ ಹೋರಾಟವೋ ಯಾವುದಕ್ಕೂ ಎದುರಾಗದ ಪ್ರಮಾಣ ಮತ್ತು ತೀವ್ರತೆಯ ವಿರೋಧಗಳು ಹೆಣ್ಣಿನ ಹೋರಾಟಕ್ಕೆ ಎದುರಾಗುತ್ತಲೇ ಇವೆ. ಮೂಕ ಅಮೈತ್ರಿಯ ಧೋರಣೆಯು ಸ್ತ್ರೀವಾದವನ್ನು ಉದ್ದಕ್ಕೂ ನಿಗದಿತ ಅಂತರದಲ್ಲಿಯೇ ಇಟ್ಟಿದೆ ಎನ್ನುವ ವಿಷಾದದೊಂದಿಗೇ ಮಹಿಳೆಯರು ಅದನ್ನು ಮೈತ್ರಿಭಾವವಾಗಿಸಲು ನಿರಂತರ ಪ್ರಯತ್ನಗಳನ್ನು ಜಾರಿಯಲ್ಲಿಟ್ಟಿದ್ದಾರೆ.

ಹೆಣ್ಣು ತನ್ನ ಮೂಲಭಾವದಲ್ಲಿಯೇ ಪ್ರೀತಿ, ಸಹಬಾಳ್ವೆ ಮತ್ತು ಹೊಂದಾಣಿಕೆಯವಳು. ಈ ಅವಳ ಅಸಾಧಾರಣ ಗುಣಗಳನ್ನೇ ಗಂಡಾಳಿಕೆಯು ಅವಳ ಮಿತಿಗಳೆಂದು, ದೌರ್ಬಲ್ಯವೆಂದು ಹೇಳುತ್ತಾ ಕೊನೆಗೆ ಅದನ್ನು ಕರಾರುಗಳನ್ನಾಗಿಸುವ ಮೌಲ್ಯವ್ಯವಸ್ಥೆಯನ್ನೂ ಸ್ಥಾಪಿಸಿಬಿಟ್ಟಿತು. ಪ್ರೀತಿ, ವಾತ್ಸಲ್ಯ ಮೊದಲಾದ ಜೀವರಕ್ಷಕ ಗುಣ ಭಾವಗಳು ಅಕ್ಷರಶಃ ಹೆಣ್ಣಿನ ಮಟ್ಟಿಗೆ ಜೀವಭಕ್ಷಕ ಗುಣಗಳೇ ಆಗಿಬಿಟ್ಟಿರುವುದನ್ನು ನಿರಾಕರಿಸುವವರನ್ನು ಸ್ತ್ರೀವಿರೋಧಿಗಳೆಂದು ಮಾತ್ರವಲ್ಲ, ಜೀವವಿರೋಧಿಗಳೆಂದು ಕರೆಯುವುದು ಅನಿವಾರ್ಯ. ಆದರೆ, ಮಹಿಳೆಯರು ಇದನ್ನು ವಾದ, ವಾಗ್ವಾದ, ಹೋರಾಟ, ಸ್ಪರ್ಧೆ ಎನ್ನುವ ನೆಲೆಯಲ್ಲಿ ಬೆಳೆಸುತ್ತಿಲ್ಲ ಎನ್ನುವುದೇ ಸ್ತ್ರೀವಾದದ ಬಹುದೊಡ್ಡ ಶಕ್ತಿಯಾಗಿದೆ.

ಸಮಕಾಲೀನ ಸನ್ನಿವೇಶವು ಸ್ತ್ರೀವಾದದ ಎದುರಿಗೆ ಎರಡು ಮುಖ್ಯ ಆದ್ಯತೆಗಳನ್ನು ಇಟ್ಟಿದೆ. ಒಂದು, ಅದನ್ನು ಕುರಿತ ಅಪವ್ಯಾಖ್ಯಾನಗಳನ್ನು ಸರಿಪಡಿಸುವುದು. ಎರಡು, ಇದರ ಮುಂದುವರಿಕೆಯೆಂಬಂತೆ, ಸ್ತ್ರೀವಾದದ ಮೂಲ ಆಶಯವಾದ 'ಸರ್ವೋದಯ'ದ ಗುರಿಯನ್ನು ಎಲ್ಲರಿಗೂ ಮನದಟ್ಟು ಮಾಡಿಸುವುದು. ಸ್ತ್ರೀವಾದವನ್ನು 'ವಾದ'ದ ಸೀಮಿತ ಚೌಕಟ್ಟಿನಿಂದ ಹೊರತಂದು 'ಸಖ್ಯಗೀತ'ವಾಗಿಸುವುದು. ಈ ತನಕ ಸ್ತ್ರೀವಾದಿ ಚಿಂತನೆಗಳು ಮತ್ತು ಹೋರಾಟಗಳು ದಶದಿಕ್ಕುಗಳಿಂದಲೂ ಎದುರಾಗುತ್ತಿದ್ದ ಕಂಡ, ಕಾಣದ ಸವಾಲುಗಳನ್ನೆಲ್ಲ ಮುಖಾಮುಖಿಯಾಗುತ್ತಲೇ ಸ್ತ್ರೀವಾದದ ಭಿತ್ತಿಯನ್ನು ಹಿಗ್ಗಿಸುತ್ತಲೇ ಬಂದಿದ್ದಾರೆ. ಸ್ತ್ರೀವಾದ